doc-130
T-P-2

SATYAVADI Founded 1917 Regd. No. M 1299

ಸತ್ಯವಾದಿ

(ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 167 | ಮಂಗಳವಾರ 12—3—46 | ಬಿಡಿ ಪ್ರತಿ 3 ಪೈ

ಬೊಂಬಾಯಿ ದುರಂತ

ಲಂಡನ್, ತಾ 6

" ಬೊಂಬಾಯಿನಲ್ಲಿ ನಿರಪರಾಧಿ ನಿತ್ಯಸ್ತ್ರ ಹಿಂದೀಯರ ಮೇಲೆ ಗುಂದು ಹಾರಿಸುವುದನ್ನು ಕಳೆದ ಫೆಬ್ರವರಿ 22 ನೇ ತಾರೀಖು ನಡೆದ ಘಟನೆ ವಿವರಿಸುನೆ. ಪಟೇಲರಲ್ಲಿ ನಾನು ನಡೆದುತೊಂಷೇ ಹೋಗುತ್ತಿದ್ದೆ. ರಸ್ತೆಯಲ್ಲಿ ಅನೇಕರಿದ್ದರು. ಪುಂಡರೂ ಆಗಿರಲಿಲ್ಲ. ಅಷ್ಟರಲ್ಲೇ ಒಂದು ಬ್ರಿಟಿಷ್ ವಾಹನವು ಬಂದಿತು. ಅದರಲ್ಲಿದ್ದ ಬ್ರಿಟಿಷ್ ಸೈನಿಕರು ಬಂದೂಕು ಮತ್ತು ಬ್ರೆಗನ್ ತೋಪುಗಳಿಂದ ಜನರ ಮೇಲೆ ಗುಂಡುಹಾರಿಸಿದರು. ಜನರು ಮನೆಗಳ ಕಡೆ ಓಡಲಾರಂಭಿಸಿದೊಡನೆ ಸೈನಿಕರು ಅತ್ತ ಬಂದೂಕಗಳನ್ನು ತಿರುಗಿಸಿ ಗುಂಡೆಸೆದರು. "

ಈ ರೀತಿ ಮಾಡಲು ಕಾರಣವೇನು?

" ಈ ಹಿಂದೀ ನಾಯಿಗಳಿಗೆ ಪಾಠ ಕಲಿ ಲು ಉಚ್ಚ ಅಧಿಕಾರಿಗಳೊಬ್ಬರು ನಿರ್ಧರಿಸಿದ ದು. ರಣರಂಗಕ್ಕೆ ತೆರಳು ವಂತೆ ಸೈನಿಕರು ಮೋಟಾರುಗಳಲ್ಲಿ ಓಡಾಡಿ ಜನರನ್ನು ಕಂಡಕಂಡಲ್ಲಿ ಗುಂಡಿಸೆದರು. ಬೆಲ್ಲಾರ್ಡ್ ರಸ್ತೆಯಲ್ಲಿ ಸೈನಿಕರು ಬಡಬಗ್ಗರ ಗುಡಿಸಲುಗಳಿಗೆ ನುಗ್ಗಿ ಗುಂಡೆಸೆದರು. "

" ಮುಷ್ಕ ಹೂಡಿದ ನಾವಿಕರು ಕೇಸಲ್ ದೇರೆಕುಗಳಿಗೆ ಹಿಂತಿರುಗುವಂತೆ ಅಧಿಕಾರಿಗಳು ಆಜ್ಞಾಪಿಸಿದ್ದರು. ಅರು ಹಾಗೆ ಬಂದ ಬಳಿಕ ಸೈನಿಕರು ಅವರನ್ನು ಸುತ್ತುಗಟ್ಟಿ ಅನ್ನ ನೀರು ಕೂಡಾ ಅವರಿಗೆ ಕೊಡಲಿಲ್ಲ. ನೀರಿಗಾಗಿ ಅವರು ಹೊರಗೆ ಬಂದೊಡನೆ ಅವರ ಮೇಲೆ ಗುಂಡೆಸೆದರು. ಬ್ರಿಟಿಷ್ ಸೇನಿಕರು ಮತ್ತು ಅಧಿಕಾರಿಗಳೇ ಈ ಸಲ ಗುಂಡು ಹಾಕಿಸಿದ್ದಾರೆ. "

" ಪುಂಡರು ಹಿಂಸಾಚಾರ ನಾಡಿದರಿಂದು ಹೇಳಲಾಗುತ್ತದೆ. ಆದರೆ ಸೈನಿಕರು ಬಹಳ ವೇಗದಿಂದ ಮೋಟಾರ್ ಓಡಿಸಿ, ಶಾಂತಿಯಿಂದಿದ್ದ ಜನರ ಮೇಲೆ ಗುಂಡೆಸೆದು ಇಬ್ಬರನ್ನು ಕೊಂದರು. ಆದುದರಿಂದಲೇ ಕೆಲವರು ರೇಗಿ ಒಂದೆರಡು ಕಲ್ಲೆಸೆದರು. "

ಹಿಂದೀ ರಾಜದ್ರೋಹಿಯು ಬರೆದು ದಿಲ್ಲ ಇದು. ಬ್ರಿಟಿಷ್ ಸೈನ್ಯಾಧಿಕಾರಿಯೊಬ್ಬನು ಪ್ರತ್ಯಕ್ಷ ಕಂಡು ಪ್ರಕಟಿಸಿದ್ದುದು. ದಬ್ಬಾಳಿಕೆಯಿಂದಲೇ ನೆಲೆನಿಂತಿರುವ ಬ್ರಿಟಿಷ್ ಸಾಮ್ರಾಜ್ಯವು ನಶಿಸಿ ಹೋಗುವ ಮೊದಲಿನ ಆಖೈರಿಯ ರುದ್ರನ್ನೋಟವಿದು (ನ. ಭಾ)

ಮುಂಬೈ ಮಾಜಿ ಮಂತ್ರಿ ಶ್ರೀ ಜೇರರು ಭಾಷಣ ಮಾಡುತ್ತಾ ಜನತಾ ಸ್ವಾತಂತ್ರ್ಯ ಬೇಕೆದರೆ – ಹುಬ್ಬಿ 6

ಆಹಾರ ವ್ಯವಸ್ಥೆ

ವಾಷಿಂಗ್ಟನ್, ಮಾ 10 — ಮುಂದಿನವಾರ ಪ್ರಪಂಚದ ಆಹಾರ ಹಂಚಿಕೆಯ ಬಗ್ಗೆ ವ್ಯವಸ್ಥೆಯನ್ನು ಮಾಡಲಾಗುವುದು. ಪ್ರಪಂಚ ಆಹಾರ ವಿಷಯವನ್ನು ಇಲ್ಲಿ ಪರೀಕ್ಷಿಸಲಾಗುವುದು ಸಂಯುಕ್ತ ಆಹಾರ ಮಂಡಲಿಗೆ ತನ್ನ ಬೇಡಿಕೆಯಲ್ಲವನ್ನೂ ಭಾರತ ಆಹಾರ ನಿಯೋಗ ಮಂಡಿಸಿದೆ. ಜಪಾನ್ ಮತ್ತು ಜರ್ಮನಿಗೆ ಹೆಚ್ಚು ಕಾಳು ಹೋಗಕೂಡದೆಂದು ಬ್ರಿಟಿಷ್ ಅನ್ನ ಮಂತ್ರಿ ಬೆನ್‌ಸ್ಮಿತ್ ತಿಳಿಸಿದರು.

ಆಗಾಖಾನ್ ವಜ್ರೋತ್ಸವ

ಮುಂಬಯಿ, ಮಾ 10 — ಒಂದು ಒಂದು ಲಕ್ಷ ಜನರು ಶ್ರೀ ಆಗಾಖಾನರ ವಜ್ರೋತ್ಸವವನ್ನು ಪ್ರೇಕ್ಷಿಸಲು ಬ್ರಿಬೋರ್ನ್ ಸ್ಟೇಡಿಯಂನಲ್ಲಿ ನೇರಿದ್ದರು ಅವರು ಇನ್ನೂರು ನಲ್ಸತ್ತಾರುವರೆ ಪೌಂಡು ತೂಗಿದರು. ಆ ತೂಕದ್ದು 90 ಲಕ್ಷ ರೂ. ಬೆಲೆ ಬಾಳುವುವು. ಗಾಂಧೀಜೀ ಅವರಿಗೆ ಚಿಂಕಾಲ ಬದುಕಿರೆಂದು ಸಂದೇಶ ಕಳುಹಿಸಿರುವರು.

ಗೋರಿಂಗ್

ನೂರೆಂಬರ್ಗ್, ಮಾ 8 — ಗೋರಿಂಗನನ್ನು ಹಿಟ್ಲರು 1943 ನೇ ವಸಂತ ಕಾಲದಲ್ಲಿ ದಸ್ತಗಿರಿ ಮಾಡಿಸಿದ್ದನೆಂಬ ವಿಚಾರ ಗೋರಿಂಗನ ವಿಚಾರಣೆಯಲ್ಲಿ ಹೊರಬಿದ್ದಿದೆ.

ಏಸು ಕ್ರಿಸ್ತ

ಏಸು ಕ್ರಿಸ್ತನು ಭಾರತ ಭೂಮಿಯಲ್ಲಿ ಕಾಶ್ಮೀರದ ಶ್ರೀ ನಗರದ ಖನ್ಯಾರ್ ಬೀದಿಯಲ್ಲಿ ಇರುವನೆಂದೂ ಲಂಡನ್ ಪುಟ್ನೀ ಮಿಷನ್‌ರಿಯ ಇವಾಂ ಸಾಮಾರವರು ಹೇಳಿರುವುದಾಗಿ ಪ್ರಕಟವಾಗಿದೆ.

ನೈತ್ತಾಂತ ಸಂಗ್ರಹ

ಬೊಂಬಾಯಿ, ಮಾ 10 — ಅಮೇರಿಕಾದಿಂದ ಎರಡೂವರೆ ಸಾವಿರ ಟನ್ ಪೆನ್ಸಿಲಿನ್ ಬಂದಿದೆ.

o o

ಲಂಡನ್, ಮಾ 10 — ರಷ್ಯಾ ವು ಹಂಗೇರಿಯೊಡನೆ ಏಪಾನ ಓಡಾಟದ ಬಗ್ಗೆ ಒಪ್ಪಂದ ಮಾಡಿಕೊಂಡಿದೆ

o o

ದಿ ಹೇಗ್, ಮಾ 10 — ಅಮಸ್ಟರ್‌ಡ್ಯಾಮಿನ ಹತ್ತಿಂದಲ್ಲಿನ ಡಚ್ ನಾಜೀ ಸ್ತ್ರೀಯರ ನಿರ್ಬಂಧ ಶಿಬಿರದಲ್ಲಿ ಉಂಟಾದ ಗಲಭೆಗಾಗಿ ಗುಂಡು ಹಾರಿಸಲಾಯಿತು.

o o

ಬೆಂಗಳೂರು, ಮಾ 11 — ಮೈಸೂರು ಸಂಸ್ಥಾನ ಮತ್ತು ಬೆಂಗಳೂರು ದಂಡಿಗೆ ಆಹಾರ ವಸ್ತು ಮೇವಿನ ಅಭಾವನಿವಾರಣೆಯಿಂದ ರಕ್ಷಣಾ ಕಾನೂನಿನ ಮೇರೆ ಜಾರಿಗೆ ಕಾರ್ಯರೇಗಳು ಬರಬಾರದೆಂದು ನಿರ್ಬಂಧಿಸಲಾಗಿದೆ.

o o

ಲಂಡನ್, ಮಾ 10 — ರಷ್ಯಾ ಸರ್ಕಾರ ಯೂಗೊಸ್ಲೇವಿಯಾದೊಡನೆ ಒಪ್ಪಂದವಾಗಿಲ್ಲವೆಂದೂ ರಷ್ಯಾಕ್ಕೆ ಎಸ್ಟೋನಿಯಾ ಕೇಳಲಾಗಿದೆಯೆಂದು ಹೇಳಲಾಗಿದೆ.

ಚಿನ್ನ ಬೆಳ್ಳಿ ಧಾರಣೆ

ಸವರನ್ 1 ಕ್ಕೆ	ರೂ. 62-8-0
ಚಿನ್ನ ತೊಲ 1 ಕ್ಕೆ	92-8-0
ಬೆಳ್ಳಿ	1-8-6

ಸಂಸ್ಥಾನ ಸುದ್ದಿಗಳು

ಮೈಸೂರು ಸಂಸ್ಥಾನದಲ್ಲಿ ಕೊಬ್ಬರಿ ಬೆಲೆಯನ್ನು ಹೆಚ್ಚಿಸುವ ವಿಚಾರದಲ್ಲಿ ಕಳೆದ 8 ನೇ ತಾರೀಖಿನ ದಿವಸ ಶ್ರೀ ಡಿ. ಎಸ್. ಮಲ್ಲಪ್ಪನವರ ನಾಯಕತ್ವದಲ್ಲಿ ನಿಯೋಗ ಗೋಷ್ಟಿಯೊಂದು ಆಕ್ಟಿಂಗ್ ದಿವಾನರಾದ ಶ್ರೀ ಪುಟ್ಟಣ್ಣಾರೆಡ್ಡಿಯವರ ಬಳಿಗೆ ಹೋಗಿತ್ತೆಂದು ತಿಳಿಯ ಬಂದಿದೆ.

ಬೆಂಗಳೂರು ಕಬ್ಬನ್ ಪಾರ್ಕು ಮತ್ತು ಲಾಲ್ ಬಾಗ್‌ಗಳಲ್ಲಿ ತರಕಾರಿ ಬೆಳೆಯುವ ಯೋಚನೆ ಮಾಡಲಾಗಿದೆ.

ಸಂಸ್ಥಾನದಲ್ಲಿ ಸಂಚಾರ ಸೌಲಭ್ಯದ ಸೂಕ್ತ ಕಾರ್ಯಕ್ರಮವನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದು ಹೈದ್ರಾಬಾದಿನಿಂದ ರಸ್ತೆ ಸೌಲಭ್ಯವನ್ನು ಪರಿಶೀಲಿಸಿ ಬಂದ ಶ್ರೀ ಇಮಾಂರು ಸರ್ಕಾರಕ್ಕೆ ಸೂಚನೆ ಮಾಡಿರುವರು.

ಮೊನ್ನೆಯ ದಿವಸ ಕುಣಿಗಲ್ ತಾಲೂಕು ಅಮೃತೂರು ಗ್ರಾಮದಲ್ಲಿನ ಗಂಗಾಮತಸ್ಥ ಗ್ರಾಮದಲ್ಲಿ ಭಾರಿ ಅಗ್ನಿ ಅನಾಹುತವಾಗಿ ಆರು ವರ್ಷದ ಬಾಲಕನೊಬ್ಬನು ಮರಣ ಹೊಂದಿದನು. ನಾಲ್ಕು ಮನೆಗಳು ಪೂರ್ಣ ಭಸ್ಮವಾದುವು. ಸು ಮಾರು ಎಂಟ್ನೂರು ರೂ. ನಷ್ಟ ಅಂದಾಜಾಗಿದೆ.

ವಿವಿಧ ವರ್ತಮಾನ

ನವದೆಹಲಿ, ಮಾ 10 — ಹೆಚ್ಚು ನ್ಯೂಸ್ ಪ್ರಿಂಟನ್ನು ಭಾರತಕ್ಕೆ ಕಳುಹಿಸಲು ಕೆನಡಾ ನಿಶ್ಚಯಿಸಿರುವುದೆಂದು ತಿಳಿಯಬಂದಿದೆ.

ನಾಗಪುರ, ಮಾ 10 — ನಿಂಬೇಕರ ಸವನ್ನು ಸ್ವೀಕರಿಸಿ ಜ || ಅವಾರಿ ಉಪವಾಸವನ್ನು ಮುಕ್ತಾಯಗೊಳಿಸಿದರು. ನಾಡಿದ್ದು ಮುಂಬಯಿನಲ್ಲಿ ಅವಾರಿ ಸರದಾರ ಪಟೇಲರ ಭೇಟಿ ನಡೆಯುವುದು.

ಬಟಾವಿಯಾ ಮಾ 10 — ಇಂಡೋನೇಷಿಯಾ ಪ್ರಧಾನಿ ಡಾ || ಹೆರಿಯರವರು ಬಟಾವಿಯಾದಲ್ಲಿ ಡಚ್ ಸೇನಿಕರನ್ನು ಇಳಿಸಿರುವುದನ್ನು ಕುರಿತು ಉತ್ತರ ಅಧಿಕಾರಿಗಳಿಗೆ ಖಂಡನಾ ಪತ್ರ ಬರೆದಿರುವರು.

ನವದೆಹಲಿ, ಮಾ 10 — ಅಂಚೆ ಮತ್ತು ತಂತೀ ಮಾನೇರುಗಳಿಗೆ ಅಧ್ಯಕ್ಷ ಆಜಾದರು ಮುಷ್ಕರ ನಿಲ್ಲಿಸಿದ್ದಕ್ಕಾಗಿ ವಂದನೆಯನ್ನರ್ಪಿಸಿರುವರು.

ನವದೆಹಲಿ, ಮಾ 10 — ರಾಜಕೀಯ ಮತ್ತು ಆಹಾರದ ಬಗ್ಗೆ ಅಧ್ಯಕ್ಷ ಆಜಾದರು ವೈಸ್ರಾಯಿ ವೇವಲ್ಲರೊಡನೆ 60 ನಿಮಿಷಕಾಲ ಸಂಭಾಷಿಸಿದರು.

ಕೈರೊ, ಮಾ 10 — ಸಿನಿಮಾಮಂದಿರವೊಂದರಲ್ಲಿ ಬಾಂಬು ಸಿಡಿದ ಪರಿಣಾಮವಾಗಿ 20 ಗಾಯ 1 ಸಾವಾಗಿದೆ.

ಟೋಕಿಯೋ ಕೊಲ್ಲಿಯಲ್ಲಿ

ಹೆಚ್. ಎಂ. ಐ. ಎಸ್. ಕಾವೇರಿ

ಟೋಕಿಯೋ ಕೊಲ್ಲಿಯನ್ನು ಪೊಲೀಸರೇ ಸಾರಿ ಪ್ರವೇಶಿಸಿರುವುದೆಂದರೆ ಹೆಚ್. ಎಂ ಐ. ಎಸ್. ಕಾವೇರಿ ನಾಳೆ ಸರಿಯುವ ಮಳೆಯನ್ನು ಲಕ್ಷಿಸದೆ ಮುನ್ನುಗ್ಗಿತು.

ಲಂಚ ನಿರೋಧ

ಮೈಸೂರು ಸರಕಾರದ ಅಧಿಕಾರಿ ಮತ್ತು ಅಡಳಿತ ಮತ್ತು ಅಡಳಿತ ವರ್ಗದಲ್ಲಿ ಲಂಚ ಭ್ರಷ್ಟಾಚಾರಗಳನ್ನು ನಿರ್ಮೂಲ ಮಾಡಲು ಇದಕ್ಕೆ ಪ್ರತ್ಯೇಕವಾಗಿ ಒಂದು ಇಲಾಖೆಯನ್ನು ಏರ್ಪಡಿಸಬೇಕೆಂದು ಲಂಚ ನಿರೋಧ ಕಮಿಟಿಯವರು ಸರಕಾರಕ್ಕೆ ಶಿಫಾರಸು ಮಾಡಿರುವುದಾಗಿ ತಿಳಿಯಬಂದಿದೆ. ಈ ಕಮಿಟಿಯ ವರದಿಯನ್ನು ಪ್ರಕಟಿಸುವರೋ ಇಲ್ಲವೋ ಇನ್ನೂ ನಿಶ್ಚಯವಾಗಿಲ್ಲವಂತೆ.

ಉಚಿತ ಹಾಲು

ಮದರಾಸು ಮಾ 8— 2 ವರ್ಷದ ಕೆಳಗಿನ ಮಕ್ಕಳಿಗೂ, ಬಸರಿ ಬಾಣಂತಿಯರಿಗೆ ಉಚಿತವಾಗಿ ಹಾಲನ್ನು ಕೊಡಲು ಮದರಾಸು ಸರ್ಕಾರದವರು ಏರ್ಪಡಿಸುವರಾಗಿದ್ದಾರೆ.

ನಂಜನಗೂಡು ದೊಡ್ಡಜಾತ್ರೆ ದನಗಳ ಪ್ರದರ್ಶನ

14–3–46 ರಲಾಗಾಯ್ತು 18–3–46 ರವರಿಗೆ ದೊಡ್ಡ ಜಾತ್ರೆ ರಥೋತ್ಸವ ಸಂದರ್ಭದಲ್ಲಿ ದನಗಳ ಪ್ರದರ್ಶನವನ್ನು ಈ ಊರಿನ ಜೋಗಿ ತೋಪಿನಲ್ಲಿ ಏರ್ಪಡಿಸಿರುತ್ತೆ. ನೀರು ನೆರಳಿನ ಸೌಕರ್ಯ ಚೆನ್ನಾಗಿದೆ. ರಾಸುಗಳಿಗೆ ಸುಂಕವಿಲ್ಲ. ವೈದ್ಯ ಸಹಾಯ ಏರ್ಪಡಿಸಿದೆ. ಉತ್ತಮ ರಾಸುಗಳಿಗೆ ಬಹುಮಾನ ಕೊಡಲಾಗುತ್ತೆ.

ಎ. ವಿ. ಕೃಷ್ಣ
ಪ್ರೆಸಿಡೆಂಟ್
ಟೌನ್ ಮುನಿಸಿಪಲ್ ಕೌನ್ಸಿಲ್
ನಂಜನಗೂಡು

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಔನ್ಸ್ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಳಿಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಪಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

At Opera —

From 8–3–46

ಮೆಹತಾಬ್ — ಸುರೇಂದ

ಪಾತ್ರವಹಿಸಿರುವ

.... ವಿಶ್ವಾಸ್....

At Ranjit

From 10–3–46

Shirin Farad

— with —

RAGINI & JAYANT

ಹಸಕ್ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

No. R 4 / 45--46

Office of the Rationing Officer

MYSORE CITY

ಪ್ರಕಟನೆ Dated 11—3—46

ಆಹಾರದ ಅಭಾವ ನಿಮಿತ್ತ ಇನ್ನು ಮುಂದೆ ಟೀ ಪಾರ್ಟಿಗಳು, ಸಂತೋಷಕೂಟಗಳು, ಸಮಾರಾಧನೆಗಳು ಮೊದಲಾದ ಸಮಾರಂಭಗಳಿಗೆ ಬೇಕಾಗುವ ಆಹಾರ ಪದಾರ್ಥಗಳಿಗೆ ಇನ್ನು ಮುಂದೆ ಸ್ಪೆಷಲ್ ಕೂಪನ್‌ಗಳನ್ನು ಕೊಡಲಾಗುವುದಿಲ್ಲವೆಂಬ ವಿಷಯವನ್ನು ಈ ಮೂಲಕ ತಿಳಿಯಪಡಿಸಿದೆ.

ಮದುವೆ, ಉಪನಯನ, ಮೊದಲಾದ ವಿಶೇಷ ಕಾರ್ಯಗಳಿಗೆ ಬೇಕಾಗುವ ಆಹಾರ ಪದಾರ್ಥಗಳನ್ನು ಕನಿಷ್ಠ ಪ್ರಮಾಣದಲ್ಲಿ ಕೊಡಲು ವ್ಯವಸ್ಥೆ ಮಾಡಿದೆ.

(ಸಹಿ) ಟಿ. ವಿ. ರೆಡ್ಡಿ
ರೇಷನಿಂಗ್ ಆಫೀಸರ್, ಮೈಸೂರು ಸಿಟಿ

ಅಲ್ಪ ವ್ಯಯದ ಕಾಯಕಲ್ಪ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸಂಜೀವನ

ಬೆಲೆ ಡಬ್ಬಿಗೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು